







ಲೇಪಾಕ್ಷಿ ಒಂದು ಪುಟ್ಟ ಊರು. ಹದಿನಾರನೆಯ ಶತಮಾನದಲ್ಲಿ ವಿಜಯನಗರ ಕಲಾಶೈಲಿಯಲ್ಲಿ ನಿರ್ಮಿಸಿದ ಐತಿಹಾಸಿಕ ದೇಗುಲ ಇಲ್ಲಿನ ಪ್ರಮುಖ ಆಕರ್ಷಣೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿದೆ ಈ ಪ್ರೇಕ್ಷಣೀಯ ಸ್ಥಳ.

ದೇವಾಲಯದ ಶಿಲ್ಪಕಲಾ ವೈಭವ ಕೈ ಬೀಸಿ ಕರೆಯುತ್ತದೆ. ಶಿವ, ವಿಷ್ಣು ಮತ್ತು ವೀರಭದ್ರ ದೇವರ ಪೂಜೆ ನಡೆಯುತ್ತಿದೆ. ವೀರಭದ್ರ ಜನರ ಕಾರಣಿಕ ದೇವರು! ಕೂರ್ಮ(ಆಮೆ) ಆಕಾರದ ಬಂಡೆಯೊಂದು ದೇವಾಲಯದ ಗರ್ಭಗುಡಿಯ ಗೋಡೆಯಾಗಿರುವುದರಿಂದ ದೇಗುಲವನ್ನು ಕೂರ್ಮಶೈಲವೆಂದೂ ಸ್ಥಳೀಯರು ಕರೆಯುತ್ತಾರೆ.

ದೇವಾಲಯವು ಗರ್ಭಗುಡಿ ಅಲ್ಲದೆ ಮುಖಮಂಟಪ, ಅರ್ಥಮಂಟಪ ಮತ್ತು ಕಲ್ಯಾಣ ಮಂಟಪವನ್ನು ಒಳಗೊಂಡಿದೆ. ಕುಸುರಿ ಕೆತ್ತನೆಗಳುಳ್ಳ ಮೂವತ್ತೆಂಟು ಕಂಬಗಳು ಆಕರ್ಷಕವಾಗಿವೆ. ಬೂದು ಮರಳುಗಲ್ಲಿನಿಂದ ಅವನ್ನು ನಿರ್ಮಿಸಲಾಗಿದೆ. ಕಂಬಗಳಲ್ಲಿ ಸಂಗೀತಗಾರರು, ನೃತ್ಯಗಾತಿಯರ ಅಪರೂಪದ ಕೆತ್ತನೆಗಳಿವೆ. ಚತುರ್ಮುಖ ಬ್ರಹ್ಮ, ಅನಂತಶಯನ, ತುಂಬುರು, ದತ್ತಾತ್ರೇಯ, ನಾರದ, ರಂಭೆ ಮುಂತಾದವರ ಚಿತ್ರಕಲೆಗಳು ಇಲ್ಲಿನ ಶಿಲ್ಪಕಂಬಗಳಲ್ಲಿ ಅರಳಿವೆ.

ದೇವಾಲಯದ ಎರಡನೇ ಪ್ರಾಂಗಣದಲ್ಲಿ ಭಾರತದಲ್ಲೇ ಅತಿ ದೊಡ್ಡದಾದ ಏಳು ಹೆಡೆಯ ಏಕಶಿಲಾ ನಾಗಲಿಂಗವನ್ನು ಕಾಣಬಹುದು. ಅದರ ಪಕ್ಕದಲ್ಲಿಯೇ ಸುಂದರವಾದ ಗಣೇಶನ ವಿಗ್ರಹವಿದೆ. ಲೇಪಾಕ್ಷಿಯ ಇನ್ನೊಂದು ಅದ್ಭುತ ತೂಗಾಡುವ ಕಂಬ. ಶಿಲ್ಪಿಗಳ ನೈಪುಣ್ಯತೆಗೆ, ಬುದ್ಧಿಮತ್ತೆ, ತಂತ್ರಗಾರಿಕೆಗೆ ಈ 'ಹ್ಯಾಂಗಿಂಗ್ ಪಿಲ್ಲರ್' ಸಾಕ್ಷಿಯಾಗಿ ನಿಂತಿದೆ. ಈ ಬೃಹತ್ ಕಂಬವು ಒಂದೇ ತುದಿಯನ್ನು ಊರಿ ಭದ್ರವಾಗಿ ನಿಂತಿದೆ! ಬೇಕಾದರೆ ಮೂರೂ ಮೂಲೆಗಳಲ್ಲೂ ಟವಲ್ ಹಾಕಿ– ತೆಗೆದು ನಮ್ಮ ಸಂದೇಹವನ್ನು ನಿವಾರಿಸಿಕೊಳ್ಳಬಹುದು!

ಭಾರತೀಯ ಪುರಾತತ್ವ ಇಲಾಖೆಯೂ 'ಈ ಕಂಬದ ನಿರ್ಮಾಣವು ಅಚಾತುರ್ಯದಿಂದ ಆಗಿಲ್ಲ. ಶಿಲ್ಪಿಗಳ ಚಾತುರ್ಯಕ್ಕೆ ಇದು ಸಾಕ್ಷಿಯಾಗಿದೆ' ಎಂದಿದೆ. ದೇವಾಲಯದ ಹೊರಾಂಗಣದಲ್ಲಿ ಸುಂದರವಾದ ಸಾಲುಕಂಬಗಳಿವೆ. ಹಳೆಗನ್ನಡದಲ್ಲಿ ಕೆತ್ತಿದ ಶಾಸನವನ್ನೂ ಈ ದೇಗುಲದಲ್ಲಿ ಕಾಣಬಹುದು.

ದೇವಾಲಯದಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಬೃಹತ್ ನಂದಿ ವಿಗ್ರಹ ಇದೆ. ಇಪ್ಪತ್ತೇಳು ಅಡಿ ಎತ್ತರದ ಹದಿನೈದು ಅಡಿ ಅಗಲದ ಈ ವಿಗ್ರಹವು ಲೇಪಾಕ್ಷಿಯನ್ನು ಪ್ರವೇಶಿಸುತ್ತಿದ್ದಂತೆಯೇ ಕಣ್ಮನ ಸೆಳೆಯುತ್ತದೆ.

ನೂರ ಎಂಟು ಶೈವಕ್ಷೇತ್ರಗಳಲ್ಲಿ ಇದೂ ಒಂದು ಎಂದು ಉಲ್ಲೇಖಿಸಲ್ಪಟ್ಟಿದೆ. ರಾಮಾಯಣದ ಶ್ರೀರಾಮಚಂದ್ರ ಮರಣಶಯ್ಯೆಯಲ್ಲಿರುವ ಜಟಾಯುವನ್ನು ಇಲ್ಲಿಯೇ ಕಂಡನಂತೆ. ಜಟಾಯುವಿಗೆ ಮೋಕ್ಷ ದೊರಕಿಸುವ ಸಲುವಾಗಿ ತೆಲುಗಿನಲ್ಲಿ 'ಲೇ ಪಕ್ಷಿ' (ಎದ್ದೇಳು ಪಕ್ಷಿ) ಎಂದನಂತೆ. ಹಾಗಾಗಿ ಈ ಊರಿಗೆ ಲೇಪಾಕ್ಷಿ ಎಂಬ ಹೆಸರು ಬಂದಿತಂತೆ. ವಿಜಯನಗರ ಸಾಮ್ರಾಜ್ಯದ ರಾಜನಾಗಿದ್ದ ರಾಮರಾಯನ ಕಾಲದಲ್ಲಿ (ಕ್ರಿಸ್ತಶಕ 1538) ಈ ದೇವಾಲಯ ಪುನರ್‌ನಿರ್ಮಾಣಗೊಂಡಿತು.